ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

## HASSAN INSTITUTE OF MEDICAL SCIENCES, HASSAN

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699/ 231599**

# 15ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ:13-03-2013ರ ಬುಧವಾರ,

: ಸ್ಥಳ :

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಸಭಾಂಗಣ

4ನೇ ಮಹಡಿ, ವಿಧಾನ ಸೌಧ, ಬೆಂಗಳೂರು.

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699

# 15ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:13-03-2013 ರಂದು ಬುಧವಾರ ಬೆಳಗ್ಗೆ: 11-30 ಗಂಟೆಗೆ ಸನ್ಮಾನ್ಯ ಎಸ್.ಎ.ರಾಮದಾಸ್, ವೈದ್ಯಕೀಯ ಶಿಕ್ಷಣ ಸಚಿವರು ಮತ್ತು ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರು ಇವರ ಘನ ಅಧ್ಯಕ್ಷತೆಯಲ್ಲಿ ವಿಕಾಸ ಸೌಧ , ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 15ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಆಡಳಿತ ಮಂಡಳಿ ಸದಸ್ಯರ ಸಂಖ್ಯೆ:16** **ಹಾಜರಿದ್ದ ಸದಸ್ಯರ ಸಂಖ್ಯೆ:11**

## ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು. | ಸದಸ್ಯರು | -- |
| 04 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 05 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | -- |
| 06 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಇಲಾಖೆ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 08 | ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,(ವೈದ್ಯಕೀಯ ಶಿಕ್ಷಣ),ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 09 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | -- |
| 10 | ಮುಖ್ಯ ಅಭಿಯಂತರರು, C & B, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |

13/03/13
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 11 | ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 12 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ. | ಸದಸ್ಯರು | -- |
| 13 | ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಆಸ್ಪತ್ರೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 14 | ಮುಖ್ಯ ಆಡಳಿತಾಧಿಕಾರಿಗಳು (ಪ್ರಭಾರ), ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 15 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 16 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:10-01-2013ರಂದು ನಡೆದ 14ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:10-01-2013ರಂದು ನಡೆದ 14ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಪಾಲನಾ ವರದಿಯನ್ನು ಓದಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. |
| 2 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಗುರುಪ್ರಸಾದ್, ಸಹಾಯಕ ಪ್ರಾಧ್ಯಾಪಕರು, ಮಾನಸಿಕರೋಗ ಚಿಕಿತ್ಸಾ ವಿಭಾಗ, ಇವರ ರಾಜೀನಾಮೆ ಪತ್ರವನ್ನು ಪರಿಶೀಲಿಸಿ ಅಂಗೀಕರಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಗುರುಪ್ರಸಾದ್, ಸಹಾಯಕ ಪ್ರಾಧ್ಯಾಪಕರು, ಮಾನಸಿಕರೋಗ ಚಿಕಿತ್ಸಾ ವಿಭಾಗ, ಇವರ ರಾಜೀನಾಮೆಯನ್ನು ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ) ಇವರು ಕಡತದ ಮೇಲೆ ಒಪ್ಪಿಗೆ ನೀಡಿದ್ದು ದಿನಾಂಕ:28-02-2013 ರಂದು ಅವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಸಭೆಯಲ್ಲಿ ಸರ್ವಾನು ಮತದಿಂದ ಒಪ್ಪಿ ಅಂಗೀಕರಿಸಲಾಯಿತು. |
| 3 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ದಾದಾಪೀರ್, ಸಹಾಯಕ ಪ್ರಾಧ್ಯಾಪಕರು, ನೇತ್ರ ಚಿಕಿತ್ಸಾ ವಿಭಾಗ ಮತ್ತು ಡಾ. ದೀಪಕ್ .ಪಿ, ಸಹಾಯಕ ಪ್ರಾಧ್ಯಾಪಕರು, ಔಷಧ ಶಾಸ್ತ್ರ ವಿಭಾಗ ಇವರುಗಳಿಗೆ ಮುಂಬಡ್ತಿ ಪರಿಶೀಲನೆ ಸಮಿತಿ ಸಭೆಯಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಮುಂಬಡ್ತಿ ನೀಡಿದ್ದು ಸದರಿ ತೀರ್ಮಾನವನ್ನು ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ದಾದಾಪೀರ್, ಸಹಾಯಕ ಪ್ರಾಧ್ಯಾಪಕರು, ನೇತ್ರ ಚಿಕಿತ್ಸಾ ವಿಭಾಗ ಮತ್ತು ಡಾ. ದೀಪಕ್ .ಪಿ, ಸಹಾಯಕ ಪ್ರಾಧ್ಯಾಪಕರು, ಔಷಧ ಶಾಸ್ತ್ರ ವಿಭಾಗ ಇವರುಗಳಿಗೆ ದಿನಾಂಕ:19-02-2013ರಂದು ನಡೆದ ಮುಂಬಡ್ತಿ ಪರಿಶೀಲನೆ ಸಮಿತಿ ಸಭೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಿಂದ ಸಹ ಪ್ರಾಧ್ಯಾಪಕರ ಹುದ್ದೆಗೆ ಮುಂಬಡ್ತಿ ನೀಡಲು ತೀರ್ಮಾನ ಮಾಡಿರುವುದನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಮುಂದಿನ ಕ್ರಮ ಕೈಗೊಳ್ಳಲು ನಿರ್ದೇಶಕರಿಗೆ ಸೂಚನೆ ನೀಡಲಾಯಿತು. |

13/03/13

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 4(1) | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**<br>ಡಾ. ಡಿ.ಪ್ರೇಮ್ ಕುಮಾರ್. ರಿಜಿಸ್ಟ್ರಾರ್, ಆರ್.ಜಿ.ಯು.ಹೆಚ್.ಎಸ್. ಬೆಂಗಳೂರು ಇವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಾಪಸ್ಸು ಕರೆಸಿಕೊಳ್ಳುವ ಬಗ್ಗೆ. | ಡಾ. ಡಿ.ಪ್ರೇಮ್ ಕುಮಾರ್‌ರವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯರಾಗಿದ್ದು ಈ ಸಂಸ್ಥೆಯ ಪ್ರಾರಂಭದ ಹಂತದಲ್ಲಿ ಬೋಧಕ ವೈದ್ಯರ ಅವಶ್ಯಕತೆ ಇದ್ದುದರಿಂದ ಸರ್ಕಾರವು ಇವರನ್ನು ಈ ಸಂಸ್ಥೆಗೆ ದಿನಾಂಕ:29-02-2009 ರಿಂದ ಅದರ ಆದೇಶ ಸಂಖ್ಯೆ: HFW 395 MMC 2007, ದಿನಾಂಕ:28-02-2009ರ ಪ್ರಕಾರ ವಿಲೀನಗೊಳಿಸಿ ಆದೇಶಿಸಿದ್ದಿತು. ಇವರು ಬೋಧಕ ಸಿಬ್ಬಂದಿಯಾಗಿ ಒಂದು ವರ್ಷ ಸೇವೆ ಸಲ್ಲಿಸಿದ ನಂತರ ಬೋಧಕೇತರ ಹುದ್ದೆಯಾದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ರಿಜಿಸ್ಟ್ರಾರ್ ಆಗಿ ಸರ್ಕಾರ ಆದೇಶ ಸಂಖ್ಯೆ: RGU/ EST 13/ 2010-11, ದಿನಾಂಕ: 23-08-2010ರ ಪ್ರಕಾರ ಒಂದು ವರ್ಷದ ಅವಧಿಗೆ ನೇಮಕ ಮಾಡಿದ್ದಿತು.<br>ದಿನಾಂಕ:29-09-2011ರ ಸರ್ಕಾರದ ಆದೇಶ ಸಂಖ್ಯೆ:ಆಕುಕ 197 ಆರ್‌ಜಿಯು 2011ರ ಪ್ರಕಾರ ಮತ್ತೊಂದು ವರ್ಷದ ಅವಧಿಗೆ ಅವರ ಸೇವೆಯನ್ನು ಆರ್.ಜಿ.ಯು.ಹೆಚ್.ಎಸ್. ನಲ್ಲಿ ಮುಂದುವರೆಸಲು ಈ ಸಂಸ್ಥೆಯ ಸ್ಪಷ್ಟ ಅಭಿಪ್ರಾಯವನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಿದ್ದು, ಸಂಸ್ಥೆಯಿಂದ ಯಾವುದೇ ಅಭಿಪ್ರಾಯ ಸಲ್ಲಿಸಿರುವುದಿಲ್ಲ ಆದರೂ ಅವರು ಆ ಸೇವೆಯಲ್ಲಿಯೇ, ಸಂಸ್ಥೆಯ/ ಸರ್ಕಾರದ ಅನುಮತಿ ಇಲ್ಲದೆ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳು ಸರ್ಕಾರಕ್ಕೆ ಮನವಿ ಮಾಡಿದ್ದನ್ನೆ ಆಧಾರವಾಗಿಟ್ಟುಕೊಂಡು ಡಾ. ಡಿ.ಪ್ರೇಮ್ ಕುಮಾರ್ ರವರು ರಿಜಿಸ್ಟ್ರಾರ್ ಆಗಿ ಅಲ್ಲಿಯೇ ಮುಂದುವರೆದಿರುತ್ತಾರೆ. ಇದನ್ನು ಗಮನಿಸಿದ ಸರ್ಕಾರವು ದಿನಾಂಕ: 19-01-2013ರಂದು ಆದೇಶ ಸಂಖ್ಯೆ:ಆಕುಕ323 ಆರ್.ಜಿ. ಯು. 2012 ರ ಪ್ರಕಾರ ಡಾ.ಡಿ. ಪ್ರೇಮಕುಮಾರ್ ರವರನ್ನು RGUHS, ರಿಜಿಸ್ಟ್ರಾರ್ ಆಗಿ ನೇಮಕ ಗೊಂಡಿದ್ದನ್ನು ಹಿಂಪಡೆದುಕೊಂಡಿದೆ.<br>ಈ ಸಂಸ್ಥೆಯ ವೈದ್ಯಶಾಸ್ತ್ರ ವಿಭಾಗದಲ್ಲಿ ಕೆಲಸದ ಒತ್ತಡ ಜಾಸ್ತಿ ಇದ್ದು ಡಾ.ಡಿ. ಪ್ರೇಮ್ ಕುಮಾರ್, ರವರ ಸೇವೆಯು ಈ ಸಂಸ್ಥೆಯ ಸೇವೆಗೆ ಅತ್ಯವಶ್ಯಕವಾಗಿ ಬೇಕಾಗಿದ್ದುದರಿಂದ, ತುರ್ತಾಗಿ ಬಿಡುಗಡೆ ಹೊಂದಿ ಈ ಸಂಸ್ಥೆಯಲ್ಲಿ ವರದಿ ಮಾಡಿಕೊಳ್ಳಲು ದಿನಾಂಕ:28-01-2013ರಂದು ಈ ಸಂಸ್ಥೆಯ ಆದೇಶ ಸಂಖ್ಯೆ: ಹಿಮ್ಸ್ :ಸಿ(1) /120/ |

13/03/13

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | 2012-13, ಅಧಿಕೃತ ಜ್ಞಾಪನಾ ಹೊರಡಿಸಿ ಡಾ. ಡಿ.ಪ್ರೇಮ್ ಕುಮಾರ್ ರವರಿಗೆ ತಿಳಿಹಿಸಲಾಗಿದ್ದೇ ಅಲ್ಲದೆ, ನಿಗದಿತ ಅವಧಿಯೊಳಗೆ ಅವರು ವರದಿ ಮಾಡಿ ಕೊಳ್ಳಲಾಗದಿದ್ದ ಪ್ರಯುಕ್ತ ನೋಟೀಸು ಸಹಾ ನೀಡಲಾಗಿದ್ದಿತು.<br>ಈ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಡಾ.ಡಿ.ಪ್ರೇಮ್‌ಕುಮಾರ್‌ರವರು ಸರ್ಕಾರದ ಆದೇಶದ ವಿರುದ್ಧ ರಾಜ್ಯ ಘನ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿರುತ್ತಾರೆ. ಆದರೆ ಸಂಸ್ಥೆಯ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಇವರ ಸೇವೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನಕ್ಕೆ ಅತ್ಯವಶ್ಯಕವಾಗಿ ಬೇಕಾಗಿರುವುದರಿಂದ ಘನ ಉಚ್ಛ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವು ಗೊಳಿಸುವಲ್ಲಿ ಕ್ರಮ ಕೈಗೊಂಡು ಡಾ. ಡಿ.ಪ್ರೇಮ್ ಕುಮಾರ್, ಹಾಲಿ ರಿಜಿಸ್ಟ್ರಾರ್, ಆರ್.ಜಿ.ಯು.ಹೆಚ್.ಎಸ್. ನಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನಕ್ಕೆ ವಾಪಸ್ಸು ಕರೆಸಿಕೊಳ್ಳುವ ಬಗ್ಗೆ ದಿನಾಂಕ:28-01-2013 ರಂದು ಸಂಸ್ಥೆಯ ನಿರ್ದೇಶಕರು, ಡಾ.ಪ್ರೇಮ್ ಕುಮಾರ್ ಆರ್.ಜಿ.ಯು.ಹೆಚ್.ಎಸ್. ಇವರು ಹಿಮ್ಸ್‌ಗೆ ತಕ್ಷಣದಿಂದ ಕರ್ತವ್ಯಕ್ಕೆ ವರದಿಮಾಡಿಕಕೊಳ್ಳುವಂತೆ ನೀಡಿರುವ ಅಧಿಕೃತ ಜ್ಞಾಪನ ಪತ್ರಕ್ಕೆ ಘಟನ್ನೋತ್ತರ ಮಂಜೂರಾತಿಯನ್ನು ಆಡಳಿತ ಮಂಡಳಿಯು ಅನುಮೋದಿಸಿತು. ದಿನಾಂಕ:28-01-2013 ರಂದು ನೀಡಿದ ಪತ್ರದ ಮೇರೆ ಅವರು ಕರ್ತವ್ಯಕ್ಕೆ ಹಾಜರಾಗದಿರುವುದನ್ನು ಆಡಳಿತ ಮಂಡಳಿಯು ಗಂಭೀರವಾಗಿ ಪರಿಗಣಿಸಿತು. ಸಂಸ್ಥೆಯ ಮತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ಇವರ ಸೇವೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅತಿ ಅವಶ್ಯಕವಾಗಿ ಬೇಕಾಗಿರುವುದರಿಂದ ಘನ ಉಚ್ಛ ನ್ಯಾಯಾಲಯವು ನೀಡಿರುವ ತಡೆ ಆಜ್ಞೆಯನ್ನು ತೆರವುಗೊಳಿಸಿ ಅವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಾಪಸ್ಸು ಕರೆಸಿಕೊಳ್ಳಲು ಕ್ರಮ ಕೈಕೊಳ್ಳುವ ಬಗ್ಗೆ ನಿರ್ದೇಶಕರಿಗೆ ಅನುಮತಿ ನೀಡಿ ಸರ್ವಾನುಮತದಿಂದ ಸಭೆ ಸೂಚನೆ ನೀಡಿತು. |
| 4(2) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾ.ಜಗದೀಶ್,ಸಿ.ಎನ್. ಸಹ ಪ್ರಾಧ್ಯಾಪಕರು, ಸಮುದಾಯ ವೈದ್ಯಶಾಸ್ತ್ರ, ವಿಭಾಗ ಇವರನ್ನು ವಯೋನಿವೃತ್ತಿ ಮೇರೆಗೆ ಕರ್ತವ್ಯದಿಂದ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಡಾ.ಜಗದೀಶ್, ಸಿ.ಎನ್. ಸಹ ಪ್ರಾಧ್ಯಾಪಕರು, ಸಮುದಾಯ ವೈದ್ಯಶಾಸ್ತ್ರ, ವಿಭಾಗ ಇವರನ್ನು ವಯೋನಿವೃತ್ತಿ ಮೇರೆಗೆ ಕರ್ತವ್ಯದಿಂದ ಬಿಡುಗಡೆಗೊಳಿಸಿ ಕ್ರೋಢೀಕೃತ ವೇತನದಡಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಬಿಡುಗಡೆಗೊಳಿಸಿ ಕ್ರೋಢೀಕೃತ ವೇತನದಡಿ ಕ್ಯಾನ್ಸರ್ ಘಟಕದ ಮುಖ್ಯಸ್ಥರನ್ನಾಗಿ ಕರ್ತವ್ಯ ನಿರ್ವಹಿಸಲು ಮುಂದುವರೆಸಲಾಗಿದ್ದು ಇದನ್ನು ಅನುಮೋದಿಸುವ ಬಗ್ಗೆ. | ಕ್ಯಾನ್ಸರ್ ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ಮುಂದುವರೆಸಲಾಗಿರುವುದನ್ನು ಆಡಳಿತ ಮಂಡಳಿಯು ಒಪ್ಪಿ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಇವರ ಕ್ರೋಢೀಕೃತ ವೇತನ ನಿಗದಿಪಡಿಸುವ ವಿಷಯದಲ್ಲಿ ಸಭೆಯು ಚರ್ಚಿಸಿ ಸಂಸ್ಥೆಯು ಯಾವುದಾದರೂ ಒಂದು ಮಂಜೂರಾದ ಹುದ್ದೆಯ ಎದುರಿಗೆ ಇವರನ್ನು ನೇಮಕ ಮಾಡಿಕೊಳ್ಳಬಹುದೆಂದು ಉಪ ಕಾರ್ಯದರ್ಶಿಗಳು ಸಭೆಯ ಮುಂದೆ ತಿಳಿಸಿದ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು ಸರ್ಕಾರದ ಅನುಮತಿಗೆ ಪ್ರಸ್ತಾವನೆ ಸಲ್ಲಿಸಿರುವ ಹನ್ನೊಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಎದುರಿಗೆ ನೇಮಕ ಮಾಡಿಕೊಳ್ಳಬಹುದೆಂದು ಸಲಹೆ ನೀಡಿದಾಗ ಈ ಸಲಹೆಯನ್ನು ಆಡಳಿತ ಮಂಡಳಿ ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು. |
| 4(3) | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧೀಕ್ಷಕರು ಮತ್ತು ಸಹಾಯಕ ಆಡಳಿತಾಧಿಕಾರಿಗಳ ಹುದ್ದೆಗಳಿಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನ ಕ್ರೋಢೀಕೃತ ವೇತನವನ್ನು ನಿಗದಿಪಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧೀಕ್ಷಕರು ಮತ್ತು ಸಹಾಯಕ ಆಡಳಿತಾಧಿಕಾರಿಗಳ ಹುದ್ದೆಗಳಿಗೆ ಅನ್ವಯವಾಗುವ ವೇತನ ಶ್ರೇಣಿಯ ಕನಿಷ್ಠ ವೇತನವನ್ನು ಕ್ರೋಢೀಕೃತ ವೇತನವನ್ನಾಗಿ ಪರಿಗಣಿಸಿ ನಿಗದಿಪಡಿಸಿ ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು. |
| | | ಇನ್ನಾವುದೇ ವಿಷಯಗಳು ಚರ್ಚೆಗೆ ಬಾರದಿರುವುದರಿಂದ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

13/03/13.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| ನಿರ್ದೇಶಕರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ಆಡಳಿತ ಮಂಡಳಿ<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. | ಸರ್ಕಾರದ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವೈದ್ಯಕೀಯ ಶಿಕ್ಷಣ ಹಾಗೂ<br>ಉಪಾಧ್ಯಕ್ಷರು, ಆಡಳಿತ ಮಂಡಳಿ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ಹಾಸನ. |